**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆ: 311/2025**

**ಸಾಕ್ಷಿಯನ್ನು ದಿಃ 01.04.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಅರ್ಜಿಯ ಮೇಲಿನ ಆದೇಶದಂತೆ ಪಾಟೀ ಸವಾಲುಃ ಆರೋಪಿ ಪರ ಶ್ರೀ. NN ವಕೀಲರಿಂದಃ**

ನಾನು ಮೊದಲು ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದೆ. ಅದನ್ನು ಬಿಟ್ಟು ಈಗ ತೋಟ ಮಾಡುತ್ತಿದ್ದೇನೆ. ಆರೋಪಿ ನಿಮಗೆ ಹೇಗೆ ಪರಿಚಯ ಎಂದರೆ ಆರೋಪಿಯ ಗಂಡ ಮತ್ತು ನಾನು ಫ್ಯಾಕ್ಟರಿಯಲ್ಲಿ ಜೊತೆಯಲ್ಲಿ ಕೆಲಸ ಮಾಡುತ್ತಿದ್ದೇವು. ಆ ಮೂಲಕ ಪರಿಚಯ. ಆರೋಪಿ ಪರಿಚಯ ಇಲ್ಲ. ನಿಮ್ಮಿಂದ ಯಾರು ಹಣ ಪಡೆದುಕೊಂಡಿದ್ದಾರೆ ಎಂದರೆ ಗಂಡ–ಹೆಂಡತಿ ಇಬ್ಬರು ಬಂದು ಹಣ ಪಡೆದುಕೊಂಡಿದ್ದಾರೆ. ಆರೋಪಿ ಮತ್ತು ಆಕೆಯಗಂಡ ಇಬ್ಬರು ಬಂದು ನನ್ನಿಂದ ಸಾಲ ಪಡೆದುಕೊಂಡಿದ್ದಾರೆ ಎಂದು ದೂರು ಮತ್ತು

ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ. ನಾನು ಆರೋಪಿಗೆ ನಗದಾಗಿ ಹಣ ಕೊಟ್ಟಿದ್ದೇನೆ. ರೂ.20 ಸಾವಿರಕ್ಕೂ ಹೆಚ್ಚಿನ ಹಣದ ವ್ಯವಹಾರ ಚೆಕ್ ಅಥವಾ RTGS ಮೂಲಕ ನಡೆಯಬೇಕು ಎಂದರೆ ಗೊತ್ತಿರಲಿಲ್ಲ. ಆ ಬಗ್ಗೆ ನನಗೆ ಗೊತ್ತಿದ್ದರೂ ಕೂಡ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಚೆಕ್ ಕೊಟ್ಟಿದ್ದಾರೆ ಅವರ ಗಂಡನಿಂದ ಚೆಕ್ ಪಡೆದಿಲ್ಲ. ಹಣ ಯಾರ ಕೈಗೆ ಕೊಟ್ಟಿದ್ದಿರಿ ಎಂದರೆ ಆರೋಪಿಗೆ ಕೊಟ್ಟಿದ್ದೇನೆ. ನನ್ನ ಬಳಿ ರೂ.475000/- ಇತ್ತು ಎಂದು ತೋರಿಸಲು ಬ್ಯಾಂಕ್ statement ಹಾಜರುಪಡಿಸಿಲ್ಲ. ಆರೋಪಿ MRV ಶಾಲೆಯಲ್ಲಿ ಶಿಕ್ಷಕಿಯಾಗಿದ್ದಾರೆ. ಯಾವ ವಿಷಯ ಪಾಠ ಮಾಡುತ್ತಾರೆ ಎಂದು ಗೊತ್ತಿಲ್ಲ. ಅದನ್ನು ಹೊರತುಪಡಿಸಿ ಆರೋಪಿ ಬೇರೆ ಏನಾದರೂ ಕೆಲಸ ಮಾಡುತ್ತಾರೆಯೇ ಎಂದರೆ ಗೊತ್ತಿಲ್ಲ. ಆರೋಪಿ ಸಾತ್ವಿಕ್ ಟೀ ಸ್ಟಾಲ್ ನ ಮಾಲೀಕರು ಎಂದು ನನ್ನ ದೂರಿನಲ್ಲಿ ಬರೆಸಿದ್ದೇನೆ ಎಂದರೆ ಆ ಬಗ್ಗೆ ಸರಿಯಾಗಿ ಗೊತ್ತಿಲ್ಲ. ನನ್ನ ದೂರಿನಲ್ಲಿ ಏನೆಲ್ಲಾ ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ವಕೀಲರು ಓದಿ ಹೇಳಿದ್ದಾರೆ. ಆರೋಪಿ ಸಾತ್ವಿಕ್ ಟೀ ಸ್ಟಾಲ್ ನ ಮಾಲೀಕರು ಎಂದು ನಿಮ್ಮ ವಕೀಲರು ನಿಮಗೆ ಹೇಳಿಲ್ಲವೇಎಂದರೆ ಹೇಳಿದ್ದಾರೆ ನಾನು ಮರೆತಿರಬಹುದು. ಪ್ರಕರಣ ದಾಖಲಿಸಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ.

ನನಗೆ 4 ಎಕರೆ ಜಮೀನು ಇದೆ. ಆ ಬಗ್ಗೆ ದಾಖಲೆ ಕೊಟ್ಟಿದ್ದಿರಾ ಎಂದರೆ ಕೇಳಿದರೆ ಹಾಜರುಪಡಿಸುತ್ತೇನೆ. ನಮ್ಮ ಮನೆಯಲ್ಲಿ ಒಟ್ಟು 8 ಜನ ಇದ್ದೇವೆ. 3 ಜನ ಮಕ್ಕಳು ಇಂಜಿನಿಯರ್ ಆಗಿದ್ದಾರೆ. ಮಕ್ಕಳೆಲ್ಲಾ ನನ್ನ ಜೊತೆ ಇದ್ದಾರೆ. ಅವರಿಗೆ ಮದುವೆಯಾಗಿದೆ. ನನಗೆ ವರ್ಷಕ್ಕೆ ವ್ಯವಸಾಯದ ಖರ್ಚು 40 ಸಾವಿರದಿಂದ 50 ಸಾವಿರ ಬರುತ್ತದೆ. ನನ್ನ ಕುಟುಂಬಕ್ಕೆ ತಿಂಗಳಿಗೆ 10 ಸಾವಿರ ಖರ್ಚು ಬರುತ್ತದೆ. ಇಬ್ಬರು ಮಕ್ಕಳು ಸರ್ಕಾರಿ ಕೆಲಸದಲ್ಲಿದ್ದು, ಒಬ್ಬ ಖಾಸಗಿ ನೌಕರಿ ಮಾಡುತ್ತಾನೆ. ಇಬ್ಬರು ಮಕ್ಕಳು ಸರ್ಕಾರಿ ವಸತಿ ಗೃಹದಲ್ಲಿ ವಾಸವಿದ್ದಾರೆ. ಖಾಸಗಿ ನೌಕರಿಯಲ್ಲಿರುವ ಮಗ ಮನೆಯಲ್ಲಿಯೇ ಇದ್ದಾರೆ. ನಾನು ವಿಜಯನಗರ ಬಡಾವಣೆಯಲ್ಲಿ ವಾಸವಿದ್ದೇನೆ. ನನ್ನ ದೂರಿನಲ್ಲಿ ನಾನು ವಿಜಯನಗರ ಬಡಾವಣೆಯಲ್ಲಿ ವಾಸ ಮಾಡುತ್ತೇನೆ ಎಂದು ಬರೆಸಿ ಹಾಕಿಲ್ಲ ಎಂದರೆ ಸರಿಯಾಗಿ ಗೊತ್ತಿಲ್ಲ.

2024 ಆಗಸ್ಟ್ ತಿಂಗಳ ಕೊನೆಯವಾರದಲ್ಲಿ ಆರೋಪಿಗೆ ಹಣ ಕೊಟ್ಟಿದ್ದೇನೆ. ತಾರೀಖು ನೆನಪಿಲ್ಲ. ಸಾಲದ ಮಾತುಕತೆ ಯಾವಾಗ ನಡೆಯಿತು ಎಂದರೆ ಹಣ ಕೊಡುವ 2 ದಿನ ಮುಂಚೆ ನಡೆಯಿತು. ಆರೋಪಿ 2-3 ಬಾರಿ ಬಂದು ಹಣ ಕೇಳಿದರು. ಆರೋಪಿ ಮತ್ತು ಅವರ ಗಂಡ ಬಂದು ಹಣ ಕೇಳಿದರು. ಆ ಬಗ್ಗೆ ದೂರಿನಲ್ಲಿ ಬರೆಸಿಲ್ಲ ಎಂದರೆ ಸರಿ. ನಾನು ಆದಾಯ ತೆರಿಗೆ ಪಾವತಿದಾರನಲ್ಲ. ನಾನು BPL ಕಾರ್ಡ್ ಹೊಂದಿದ್ದೇನೆ.

(**ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು**, **ಕೋರಿಕೆ ಮೇರೆಗೆ ಮುಂದೂಡಲಾಯಿತು**.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.